ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ಕರ್ನಾಟಕ ವೈಭವ

ಸಹಯೋಗ

ಪರಿವರ್ತನ ರಾಣೇಬೆನ್ನೂರು

# ಮಕ್ಕಳ ದೇಸಿ ಬೇಸಿಗೆ ಶಿಬಿರ

## ಉದ್ಘಾಟನಾ ಸಮಾರಂಭ

ಸಾನಿಧ್ಯ : **ಸ್ವಾಮಿ ರಘುವೀರಾನಂದಜಿ** ಅಧ್ಯಕ್ಷರು, ರಾಮಕೃಷ್ಣ ವಿವೇಕಾನಂದ ಆಶ್ರಮ ಹುಬ್ಬಳ್ಳಿ

ಉದ್ಘಾಟನೆ : **ಡಾ. ರಾಮು ಮೂಲಗಿ** ರಾಷ್ಟ್ರ ಪ್ರಶಸ್ತಿ ಪುರಸ್ಕೃತ, ಶಿಕ್ಷಕರು.

ಅಧ್ಯಕ್ಷತೆ : **ಪ್ರೊ. ಸಿ. ಟಿ. ಗುರುಪ್ರಸಾದ್** ಕುಲಪತಿಯವರು, (ಪ್ರ) ಕ.ಜಾ.ವಿ.ವಿ. ಗೊಟಗೋಡಿ.

ಅತಿಥಿಗಳು : **ಶ್ರೀ ಲಿಂಗಯ್ಯ ಹಿರೇಮಠ** ಅಧ್ಯಕ್ಷರು, ಕ.ಸಾ.ಪ. ಹಾವೇರಿ.

ಉಪಸ್ಥಿತಿ : **ಪ್ರೊ. ಎನ್. ಎಂ. ಸಾಲಿ** ಕುಲಸಚಿವರು (ಮೌಲ್ಯಮಾಪನ)

**ಡಾ|| ಗಿರೀಶ ಕೆಂಚಪ್ಪನವರ** ಸದಸ್ಯರು, ಪರಿವರ್ತನ ರಾಣೇಬೆನ್ನೂರ. M.B.B.S

**ದಿನಾಂಕ : 11-05-2022 ಸಮಯ : 11-30 ಕ್ಕೆ ಸ್ಥಳ : ಮಲ್ಲಿಗೆದಂಡೆ, ಕ.ಜಾ.ವಿ.ವಿ.**

---

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ಸಹಯೋಗ

ಪರಿವರ್ತನ ರಾಣೇಬೆನ್ನೂರು

ಕರ್ನಾಟಕ ವೈಭವ

# ಮಕ್ಕಳ ದೇಸಿ ಬೇಸಿಗೆ ಶಿಬಿರ

## ಸಮಾರೋಪ ಸಮಾರಂಭ

ಅಧ್ಯಕ್ಷತೆ : **ಪ್ರೊ. ಸಿ.ಟಿ. ಗುರುಪ್ರಸಾದ್**

ಕುಲಪತಿಯವರು(ಪ್ರ).

ಸಮಾರೋಪ ನುಡಿ : **ಡಾ|| ಗಣೇಶ ದೇವಗಿರಿಮಠ**

ಸದಸ್ಯರು, ಪರಿವರ್ತನ, ರಾಣಿಬೆನ್ನೂರು.

ಮುಖ್ಯಅತಿಥಿಗಳು : **ಡಾ. ನಾಗರಾಜ ದ್ಯಾಮನಕೊಪ್ಪ**

ಪ್ರಾಚಾರ್ಯರು, ಶ್ರೀ ಚನ್ನಪ್ಪ ಕುನ್ನೂರಿರ ಪ.ಪೂ. ಕಾಲೇಜ್, ಶಿಗ್ಗಾವಿ.

ಉಪಸ್ಥಿತಿ : **ಪ್ರೊ. ಎನ್.ಎಂ. ಸಾಲಿ**

ಕುಲಸಚಿವರು (ಮೌಲ್ಯಮಾಪನ)

**ದಿನಾಂಕ : 15-05-2022 ಸಮಯ : ಮಧ್ಯಾಹ್ನ 3-00 ಕ್ಕೆ**

# ಮಕ್ಕಳಿಗೆ ಮೂಲ ಜನಪದ ಸಾಹಿತ್ಯದ ಅರಿವು ಅಗತ್ಯ

## ಮಕ್ಕಳ ದೇಶಿ ಬೇಸಿಗೆ ಶಿಬಿರ ಉದ್ಘಾಟಿಸಿದ ಡಾ. ರಾಮು ಮೂಲಗಿ ಅಭಿಪ್ರಾಯ

• **ಕನ್ನಡಪ್ರಭ ವಾರ್ತೆ** ಶಿಗ್ಗಾಂವಿ

ಇಂದು ನಾವೆಲ್ಲರೂ ಸೇರಿ ನಮ್ಮದಲ್ಲದ ಸಂಸ್ಕೃತಿಯ ಹಿಂದೆ ಬೆನ್ನತ್ತಿ ಹೋಗುತ್ತಿದ್ದೇವೆ. ನಮ್ಮ ನೆಲದ ಸಂಸ್ಕೃತಿಯನ್ನು ನಾವು ಮರೆಯುತ್ತಿದ್ದೇವೆ ಎಂದು ಜನಪದ ಕಲಾವಿದ ಡಾ. ರಾಮು ಮೂಲಗಿ ಹೇಳಿದರು.

ತಾಲೂಕಿನ ಗೊಟಗೋಡಿಯ ಕರ್ನಾಟಕ ಜಾನಪದವಿಶ್ವವಿದ್ಯಾಲಯಹಾಗೂರಾಣೆಬೆನ್ನೂರಿನ ಕರ್ನಾಟಕ ವೈಭವ ಪರಂಪರೆ ಸಹಯೋಗದಲ್ಲಿ ಜಾನಪದ ವಿವಿಯ ಮಲ್ಲಿಗೆ ದಂಡೆ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಮಕ್ಕಳ ದೇಶಿ ಬೇಸಿಗೆ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು. ಮಕ್ಕಳಿಗೆ ನೈತಿಕ ಪಾಠವನ್ನು ಹೇಳುವ ನಮ್ಮ ಜನಪದ ಗೀತೆ, ಕಥೆ, ಗಾದೆ, ಒಗಟು ಈ ಅನೇಕ ಅಂಶಗಳನ್ನು ನಾವು ಜನಪದ ಸಾಹಿತ್ಯದಲ್ಲಿ ಕಾಣಬಹುದು. ಮೂಲ ಜನಪದ ಹಾಗೂ ಖೋಟಾ ಜನಪದದ ಬಗ್ಗೆ ಇಂದಿನ ಯುವ ಪೀಳಿಗೆಗೆ ಅರಿವು ಮೂಡಿಸಬೇಕಿದೆ ಎಂದು ಅವರು ಹೇಳಿದರು.

ಪರಿವರ್ತನಾ ರಾಣೆಬೆನ್ನೂರನ ಸದಸ್ಯರಾದ ಡಾ. ಗಿರೀಶ ಕೆಂಚಪ್ಪನವರ ಮಾತನಾಡಿ, ಇಂದು ಮಕ್ಕಳಿಗೆ ರಾಷ್ಟ್ರೀಯಪ್ರಜ್ಞೆ ಮೂಡಿಸುವ ಅಗತ್ಯವಿದೆ. ಇದು ಮೂಲ ಜನಪದ ಸಾಹಿತ್ಯದ ಮೂಲಕ ಸಾಧ್ಯ. ಆದಕ್ಕಾಗಿ ಜಾನಪದ ವಿವಿಯಲ್ಲಿ ಇಂತಹ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಜಾನಪದ ವಿವಿ ಕುಲಪತಿ ಪ್ರೊ. ಸಿ.ಟಿ. ಗುರುಪ್ರಸಾದ್ ಮಾತನಾಡಿ, ಇಂದು ಜಾನಪದ ವಿಶ್ವವಿದ್ಯಾಲಯ ಜನರ ಕಡೆಗೆ ಹೋಗಬೇಕಾಗಿದೆ. ಇದು ಜನಪದ ಕಲಾವಿದರ ವಿಶ್ವವಿದ್ಯಾಲಯ. ಗ್ರಾಮೀಣ ಸಂಸ್ಕೃತಿಯನ್ನು ಉಳಿಸುವ ಕೆಲಸ ಜನಪದ ವಿವಿ ಮಾಡಲಿದೆ. ಆ ನಿಟ್ಟಿನಲ್ಲಿ ಕರ್ನಾಟಕ ರಾಜ್ಯದ ಯಾವುದೇ ವಿಶ್ವವಿದ್ಯಾಲಯಗಳು ಮಾಡದೇ ಇರುವ ಕಾರ್ಯವನ್ನು ಜಾನಪದ ವಿವಿಯು ಮಕ್ಕಳಿಗೆ ಶಿಬಿರವನ್ನು ಆಯೋಜನೆ ಮಾಡುವ ಮೂಲಕ ಮಾಡಿದೆ. ಮಕ್ಕಳಿಗೆ ನಮ್ಮ ಸಂಸ್ಕೃತಿ ಕಲೆ ಹಾಗೂ ವಿಶ್ವವಿದ್ಯಾಲಯದ ಮಟ್ಟದಲ್ಲಿ ಆಲೋಚನಾ ಶಕ್ತಿಗಳನ್ನು ಬೆಳೆಸುವ ಕೆಲಸ ಮಾಡುತ್ತಿದೆ ಎಂದರು.

KP



ಜಾನಪದ ವಿವಿಯ ಮಲ್ಲಿಗೆ ದಂಡೆ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಮಕ್ಕಳ ದೇಶಿ ಬೇಸಿಗೆ ಶಿಬಿರವನ್ನು ಜನಪದ ಕಲಾವಿದ ಡಾ. ರಾಮು ಮೂಲಗಿ ಉದ್ಘಾಟಿಸಿದರು.

ಸಾನ್ನಿಧ್ಯ ವಹಿಸಿದ್ದ ಹುಬ್ಬಳ್ಳಿಯ ರಾಮಕೃಷ್ಣ ವಿವೇಕಾನಂದ ಆಶ್ರಮದ ಸ್ವಾಮೀಜಿಗಳಾದ ರಘುವೀರಾನಂದಜಿ ಅವರು ಮಾತನಾಡಿ, ಮನುಷ್ಯನು ಕೇವಲ ಮನುಷ್ಯನಲ್ಲ, ಅವನು ಸಾಕ್ಷಾತಃ ಶಿವನ ಸ್ವರೂಪ. ಅಂದುಕೊಂಡಿದ್ದನ್ನೆಲ್ಲ ಮಾಡುವ ಶಕ್ತಿ ಮನುಷ್ಯನಿಗೆ ಇದೆ. ಜನಪದ ವಿವಿ ಜನಪರವಾಗಿದೆ. ಮಕ್ಕಳನ್ನು ಸಂಸ್ಕಾರವಂತರನ್ನಾಗಿ ಮಾಡಬೇಕಿದೆ ಎಂದರು. ಮೌಲ್ಯಮಾಪನ ಕುಲಸಚಿವ ಎನ್.ಎಂ. ಸಾಲಿ ಮಾತನಾಡಿ, ನಾವು ನಮ್ಮ ಜೀವನದಲ್ಲಿ ನಮ್ಮ ಮೂಲ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಾಗ ಮಾತ್ರ ನಮ್ಮ ಜನಪದ ಸಂಸ್ಕೃತಿ ಉಳಿಸಲು ಸಾಧ್ಯ ಎಂದರು.

ಶಿಬಿರದ ನಿರ್ದೇಶಕ ಡಾ. ನಾಗರಾಜ ಎಸ್. ಪ್ರಾಸ್ತಾವಿಕವಾಗಿ ಮಾತನಾಡಿದರು. ವಿವಿಯ ಬೋಧಕ-ಬೋಧಕೇತರ ಸಿಬ್ಬಂದಿ, ಶಿಬಿರದ ಮಕ್ಕಳು, ಪಾಲಕರು ಹಾಜರಿದ್ದರು. ಸಹಾಯಕ ಕುಲಸಚಿವ ಷಹಜಹಾನ್ ಮುದಕವಿ ಸ್ವಾಗತಿಸಿದರು. ಕಲಾ ಅಧ್ಯಾಪಕ ಶರೀಫ ಮಾಕಪ್ಪನವರ ಪ್ರಾರ್ಥಿಸಿದರು. ಪ್ರಾಧ್ಯಾಪಕ ಡಾ. ಚಂದ್ರಪ್ಪ ಸೊಬಟಿ ಕಾರ್ಯಕ್ರಮ ನಿರೂಪಿಸಿದರು. ಪ್ರಾಧ್ಯಾಪಕಿ ಡಾ. ವಿಜಯಲಕ್ಷ್ಮೀ ಗೇಟಿ ವಂದಿಸಿದರು.

**Source: Kannada Prabha, Date: 12-05-2022**

# ಮಕ್ಕಳಿಗೆ ಮೂಲ ಜನಪದ ಸಾಹಿತ್ಯ ತಿಳಿಸಿ

ಶಿಗ್ಗಾವಿ (ಗ್ರಾಮೀಣ) : ಇಂದು ನಮ್ಮದಲ್ಲದ ಸಂಸ್ಕೃತಿಯ ಹಿಂದೆ ಬೆನ್ನತ್ತಿ, ದೇಶಿಯ ಸಂಸ್ಕೃತಿ ಮರೆಯುತ್ತಿದ್ದೇವೆ ಎಂದು ಜನಪದ ಕಲಾವಿದ ಡಾ.ರಾಮು ಮೂಲಗಿ ವಿಷಾದ ವ್ಯಕ್ತಪಡಿಸಿದರು.

ತಾಲೂಕಿನ ಗೊಟಗೋಡಿಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ವೈಭವ ಪರಂಪರೆ ರಾಣೇಬೆನ್ನೂರ ಸಹಯೋಗದಲ್ಲಿ ಜಾನಪದ ವಿವಿಯ ಮಲ್ಲಿಗೆ ದಂಡೆ ಸಭಾಂಗಣದಲ್ಲಿ ಹಮ್ಮಿಕೊಂಡ ಮಕ್ಕಳ ದೇಶಿ ಬೇಸಿಗೆ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳಿಗೆ ನೈತಿಕ ಪಾಠ ಹೇಳುವ ನಮ್ಮ ಜನಪದ ಗೀತೆ, ಕಥೆ, ಗಾದೆ, ಒಗಟು ಅನೇಕ ಅಂಶ ಜನಪದ ಸಾಹಿತ್ಯದಲ್ಲಿ ಕಾಣಬಹುದು. ಮೂಲ ಜನಪದ ಬಗ್ಗೆ ಇಂದಿನ ಯುವ ಪೀಳಿಗೆಗೆ ಅರಿವು ಮೂಡಿಸಬೇಕಿದೆ ಎಂದರು.

ಪರಿವರ್ತನಾ ರಾಣೇಬೆನ್ನೂರನ ಸದಸ್ಯ ಡಾ. ಗಿರೀಶ ಕೆಂಚಪ್ಪನವರ ಮಾತನಾಡಿ, ಇಂದು ಮಕ್ಕಳಿಗೆ ರಾಷ್ಟ್ರೀಯ ಪ್ರಜ್ಞೆ ಮೂಡಿಸುವ ಅಗತ್ಯವಿದ್ದು, ಇದು ಮೂಲ ಜನಪದ ಸಾಹಿತ್ಯದಿಂದ ಸಾಧ್ಯ. ಆದಕ್ಕಾಗಿ ಜಾನಪದ ವಿವಿಯಲ್ಲಿ ಇಂತಹ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಜಾನಪದ ವಿವಿ ಕುಲಪತಿ ಪ್ರೊ.ಸಿ.ಟಿ. ಗುರುಪ್ರಸಾದ್ ಮಾತನಾಡಿ, ಇಂದು ಜಾನಪದ ವಿವಿ ಜನರ ಕಡೆಗೆ ಹೋಗಬೇಕಾಗಿದೆ. ಇದು ಜನಪದ ಕಲಾವಿದರ ವಿಶ್ವವಿದ್ಯಾಲಯ. ಗ್ರಾಮೀಣ ಸಂಸ್ಕೃತಿ ಉಳಿಸುವ ಕೆಲಸ ಜನಪದ ವಿವಿ ಮಾಡಲಿದೆ. ಆ ನಿಟ್ಟಿನಲ್ಲಿ ಕರ್ನಾಟಕ ರಾಜ್ಯದ ಯಾವುದೇ ವಿವಿ ಮಾಡದ ಕಾರ್ಯವನ್ನು ಜಾನಪದ ವಿವಿ ಮಕ್ಕಳಿಗೆ ಶಿಬಿರ ಆಯೋಜಿಸುವ ಮೂಲಕ ಮಕ್ಕಳಿಗೆ ನಮ್ಮ ಸಂಸ್ಕೃತಿ ಕಲೆ, ವಿಶ್ವವಿದ್ಯಾಲದ ಮಟ್ಟದಲ್ಲಿ ಆಲೋಚನಾ ಶಕ್ತಿ ಬೆಳೆಸುವ ಕೆಲಸ ಮಾಡುತ್ತಿದೆ ಎಂದರು.



ಗೊಟಗೋಡಿಯ ಕರ್ನಾಟಕ ಜಾನಪದ ವಿವಿಯ ಮಲ್ಲಿಗೆ ದಂಡೆ ಸಭಾಂಗಣದಲ್ಲಿ ಮಕ್ಕಳ ದೇಶಿ ಬೇಸಿಗೆ ಶಿಬಿರವನ್ನು ಜನಪದ ಕಲಾವಿದ ಡಾ. ರಾಮು ಮೂಲಗಿ ಉದ್ಘಾಟಿಸಿದರು.

ಸಾನ್ನಿಧ್ಯ ವಹಿಸಿದ್ದ ಹುಬ್ಬಳ್ಳಿಯ ರಾಮಕೃಷ್ಣ ವಿವೇಕಾನಂದ ಆಶ್ರಮದ ಸ್ವಾಮೀಜಿ ರಘುವೀರಾನಂದಜಿ ಮಾತನಾಡಿ, ಮನುಷ್ಯ ಕೇವಲ ಮನುಷ್ಯನಲ್ಲ. ಅವನು ಸಾಕ್ಷಾತಃ ಶಿವನ ಸ್ವರೂಪ. ಜನಪದ ವಿವಿ ಜನಪರವಾಗಿದೆ ಮಕ್ಕಳನ್ನು ಸಂಸ್ಕಾರ ನೀಡಬೇಕಿದೆ ಎಂದರು.

ಮೌಲ್ಯಮಾಪನ ಕುಲಸಚಿವ ಎನ್.ಎಮ್. ಸಾಲಿ ಮಾತನಾಡಿ, ಜೀವನದಲ್ಲಿ ನಮ್ಮ ಮೂಲ ಸಂಸ್ಕೃತಿ ಮೈಗೂಡಿಸಿಕೊಂಡಾಗ ಮಾತ್ರ, ನಮ್ಮ ಜನಪದ ಸಂಸ್ಕೃತಿ ಉಳಿಸಲು ಸಾಧ್ಯ ಎಂದರು. ಶಿಬಿರದ ನಿರ್ದೇಶಕರಾದ ಡಾ.ನಾಗರಾಜ ಎಸ್. ಮಾತನಾಡಿದರು. ಸಹಾಯಕ ಕುಲಸಚಿವರಾದ ಷಹಜಾನ ಮುದಕವಿ, ಕಲಾ ಅಧ್ಯಾಪಕ ಶರೀಫ ಮಾಕಪ್ಪನವರ, ಪ್ರಾಧ್ಯಾಪಕ ಡಾ.ಚಂದ್ರಪ್ಪ ಸೊಬಟಿ, ಪ್ರಾಧ್ಯಾಪಕಿ ಡಾ.ವಿಜಯಲಕ್ಷ್ಮೀ ಗೇಟಿ, ವಿವಿಯ ಬೋಧಕ, ಬೋಧಕೇತರ ಸಿಬ್ಬಂದಿ, ಶಿಬಿರದಲ್ಲಿನ ಮಕ್ಕಳು ಪಾಲಕರು ಹಾಜರಿದ್ದರು.

ಸಂಯುಕ್ತ ಕರ್ನಾಟಕ Thu, 12 May 2022
epaper.samyukthakarnataka.com/c/67980120

**Source: Samyukta Karnataka, date: 12-05-2022**

## ಕಲಾವಿದ ಡಾ. ರಾಮು ಮೂಲಗಿ ಸಲಹೆ | ಮಕ್ಕಳ ಬೇಸಿಗೆ ಶಿಬಿರ ಉದ್ಘಾಟನೆ

# ಜನಪದ ಸಂಸ್ಕೃತಿಯ ಅರಿವು ಮೂಡಿಸಬೇಕಿದೆ

■ **ವಿಜಯವಾಣಿ ಸುದ್ದಿಜಾಲ ಶಿಗ್ಗಾಂವಿ**

ಪರಕೀಯ ಸಂಸ್ಕೃತಿಯ ಬೆನ್ನತ್ತಿ ಹೋಗುತ್ತಿರುವುದರಿಂದ ನಮ್ಮ ನೆಲದ ಮೂಲಸಂಸ್ಕೃತಿಯನ್ನು ಮರೆಯುತ್ತಿದ್ದೇವೆ. ಇಂದು ಮಕ್ಕಳಿಗೆ ಮೂಲ ಜನಪದ ಸಾಹಿತ್ಯದ ಅರಿವು ಮೂಡಿಸುವ ಅವಶ್ಯಕತೆ ಇದೆ ಎಂದು ಜನಪದ ಕಲಾವಿದ ಡಾ. ರಾಮು ಮೂಲಗಿ ಹೇಳಿದರು.

ಇಲ್ಲಿನ ಜಾನಪದ ವಿವಿಯಲ್ಲಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ವೈಭವ ಪರಂಪರೆ ರಾಣೆಬೆನ್ನೂರ ಸಹಯೋಗದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಮಕ್ಕಳ ಬೇಸಿಗೆ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳಿಗೆ ನೈತಿಕ ಪಾಠ ಹೇಳುವ ಜನಪದ ಗೀತೆ, ಕಥೆ, ಗಾದೆ, ಒಗಟುಗಳು ಮತ್ತಿತರ ಅಂಶಗಳನ್ನು ಜನಪದ ಸಾಹಿತ್ಯದಲ್ಲಿ ಕಾಣಬಹುದು. ಮೂಲ ಜನಪದ ಹಾಗೂ ಖೋಟಾ ಜನಪದದ ಬಗ್ಗೆ ಇಂದಿನ ಯುವ ಪೀಳಿಗೆಗೆ ಅರಿವು ಮೂಡಿಸಬೇಕಿದೆ ಎಂದು ಹೇಳಿದರು.

ಪರಿವರ್ತನಾ ರಾಣೆಬೆನ್ನೂರ ಸದಸ್ಯ ಡಾ. ಗಿರೀಶ ಕೆಂಚಪ್ಪನವರ ಮಾತನಾಡಿ, ಇಂದಿನ ಮಕ್ಕಳಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸುವ ಅಗತ್ಯವಿದೆ. ಇದು ಮೂಲ ಜನಪದ ಸಾಹಿತ್ಯದ ಮೂಲಕ ಸಾಧ್ಯವಿದೆ. ಅದಕ್ಕಾಗಿ ಜಾನಪದ ವಿವಿಯಲ್ಲಿ ಇಂತಹ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದರು.



**ಶಿಗ್ಗಾಂವಿಯ ಜಾನಪದ ವಿವಿಯಲ್ಲಿ ಬುಧವಾರ ಹಮ್ಮಿಕೊಂಡಿದ್ದ ಮಕ್ಕಳ ದೇಶಿ ಬೇಸಿಗೆ ಶಿಬಿರವನ್ನು ಜನಪದ ಕಲಾವಿದ ಡಾ. ರಾಮು ಮೂಲಗಿ ಉದ್ಘಾಟಿಸಿದರು. ಶ್ರೀ ರಘುವೀರಾನಂದಜೀ ಸ್ವಾಮೀಜಿ, ಪ್ರೊ. ಸಿ.ಟಿ. ಗುರುಪ್ರಸಾದ, ಡಾ. ಗಿರೀಶ ಕೆಂಚಪ್ಪನವರ, ಇತರರಿದ್ದರು.**

ಅಧ್ಯಕ್ಷತೆ ವಹಿಸಿದ್ದ ವಿವಿ ಕುಲಪತಿ ಪ್ರೊ. ಸಿ.ಟಿ. ಗುರುಪ್ರಸಾದ ಮಾತನಾಡಿ, ಜಾನಪದ ವಿಶ್ವವಿದ್ಯಾಲಯ ಜನರ ಕಡೆಗೆ ಹೋಗಬೇಕಾಗಿದೆ. ಇದು ಜನಪದ ಕಲಾವಿದರ ವಿಶ್ವವಿದ್ಯಾಲಯ. ಗ್ರಾಮೀಣ ಸಂಸ್ಕೃತಿಯನ್ನು ಉಳಿಸುವ ಕೆಲಸ ಜನಪದ ವಿವಿ ಮಾಡಲಿದೆ. ಆ ನಿಟ್ಟಿನಲ್ಲಿ ರಾಜ್ಯದ ಯಾವುದೆ ವಿಶ್ವವಿದ್ಯಾಲಯಗಳು ಮಾಡದೇ ಇರುವ ಕಾರ್ಯವನ್ನು ಜಾನಪದ ವಿವಿಯು ಮಕ್ಕಳಿಗೆ ಶಿಬಿರವನ್ನು ಆಯೋಜನೆ ಮಾಡುವ ಮೂಲಕ ನಮ್ಮ ಸಂಸ್ಕೃತಿ, ಕಲೆ ಹಾಗೂ ವಿಶ್ವವಿದ್ಯಾಲಯದ ಮಟ್ಟದಲ್ಲಿ ಆಲೋಚನಾ ಶಕ್ತಿಗಳನ್ನು ಬೆಳೆಸುವ ಕೆಲಸ ಮಾಡುತ್ತಿದೆ ಎಂದರು.

ಸಾನ್ನಿಧ್ಯ ವಹಿಸಿದ್ದ ಹುಬ್ಬಳ್ಳಿಯ ರಾಮಕೃಷ್ಣ ವಿವೇಕಾನಂದ ಆಶ್ರಮದ ಶ್ರೀ ರಘುವೀರಾನಂದಜೀ ಸ್ವಾಮೀಜಿ ಮಾತನಾಡಿ, ಮನುಷ್ಯ ಸಾಕ್ಷಾತ್ ಶಿವನ ಸ್ವರೂಪ. ಅಂದುಕೊಂಡಿದ್ದನ್ನೆಲ್ಲ ಮಾಡುವ ಶಕ್ತಿಯಿದೆ. ಜನಪದ ವಿವಿ ಜನಪರವಾಗಿದೆ. ಮಕ್ಕಳನ್ನು ಸಂಸ್ಕಾರವಂತರನ್ನಾಗಿ ಮಾಡಬೇಕಿದೆ ಎಂದರು.

ಮೌಲ್ಯಮಾಪನ ಕುಲಸಚಿವ ಎನ್.ಎಂ. ಸಾಲಿ, ಶಿಬಿರದ ನಿರ್ದೇಶಕ ಡಾ. ನಾಗರಾಜ ಎಸ್, ಸಹಾಯಕ ಕುಲಸಚಿವ ಷಹಜಾನ ಮುದಕವಿ, ಕಲಾ ಅಧ್ಯಾಪಕ ಶರೀಫ ಮಾಕಪ್ಪನವರ, ಡಾ. ಚಂದ್ರಪ್ಪ ಸೊಬಟಿ, ಡಾ. ವಿಜಯಲಕ್ಷ್ಮೀ ಗೇಟಿ, ಇತರರಿದ್ದರು.

**Source: Vijayavani, date: 12-05-2022**



ಶಿಗ್ಗಾವಿ ತಾಲ್ಲೂಕಿನ ಗೊಟಗೋಡಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಆವರಣದಲ್ಲಿ ಬುಧವಾರ ನಡೆದ ಮಕ್ಕಳ ದೇಸಿ ಬೇಸಿಗೆ ಶಿಬಿರವನ್ನು ಜಾನಪದ ಕಲಾವಿದ ರಾಮು ಮೂಲಗಿ ಉದ್ಘಾಟಿಸಿದರು

# ದೇಸಿ ಬೇಸಿಗೆ ಶಿಬಿರ ಉದ್ಘಾಟನೆ

ಶಿಗ್ಗಾವಿ: ನಾಡು, ನುಡಿ ಕಟ್ಟುವ ದೇಶಿ ಮಕ್ಕಳಲ್ಲಿ ನೆಲಮೂಲ ಸಂಸ್ಕೃತಿ. ಸಂಸ್ಕಾರಗಳನ್ನು ಬಿತ್ತುವ ಹೊಣೆಗಾರಿಗೆ ಪ್ರತಿ ಪಾಲಕ, ಪೋಷಕರ ಮೇಲಿದೆ ಎನ್ನುವುದನ್ನು ಮರೆಯಬಾರದು ಎಂದು ಜಾನಪದ ಕಲಾವಿದ ರಾಮು ಮೂಲಗಿ ಹೇಳಿದರು.

ತಾಲ್ಲೂಕಿನ ಗೊಟಗೋಡಿಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಆವರಣದಲ್ಲಿ ಬುಧವಾರ ಕರ್ನಾಟಕ ವೈಭವ ಪರಿವರ್ತನಾ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಸಹಯೋಗದಲ್ಲಿ ನಡೆದ ಮಕ್ಕಳ ದೇಸಿ ಬೇಸಿಗೆ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು. ನಾಡಿನ ಸಂಸ್ಕೃತಿ ಜಾನಪದವಾಗಿದ್ದು, ಭವ್ಯ ಪರಂಪರೆಯನ್ನು ಹೊಂದಿದೆ. ಹಂತಿಪದ, ಸೋಬಾನೆಪದ, ಬಿಸುಪದ, ಕೋಲಾಟ, ಹುಬ್ಬಹರಿದಿನಗಳ ಪದಗಳು ನಾಡಿನ ಸೊಗಡನ್ನು ಹೆಚ್ಚಿಸಿದೆ. ಆದರೆ, ಇಂದಿನ ಕೊಟ್ಟಿ ಜಾನಪದದ ಹಾಡುಗಳು ಹೆಚ್ಚಿನ ಪ್ರಚಾರ ಪಡೆಯುತ್ತಿವೆ ಎಂದು ವಿಷಾದ ವ್ಯಕ್ತಪಡಿಸಿದರು.

ಹುಬ್ಬಳ್ಳಿ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷ ಸ್ವಾಮಿ ರಘುವೀರಾನಂದಜಿ ಸಾನ್ನಿಧ್ಯ ವಹಿಸಿ, ನಾವೆಲ್ಲರು ಭಾರತೀಯರು ಎಂಬ ಭಾವನೆ ಮೂಡಬೇಕು. ಸಮಾನತೆ ಸರ್ವರಲಿ ಬರಬೇಕು. ಕಾನೂನು ಪ್ರತಿಯೊಬ್ಬರಿಗೆ ನೆರವಾಗಬೇಕು ಎಂದರು.

ಜಾನಪದ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಸಿ.ಬಿ. ಗುರುಪ್ರಸಾದ್ ಅಧ್ಯಕ್ಷತೆ ವಹಿಸಿ, ವಿಶ್ವವಿದ್ಯಾಲಯದ ಮಟ್ಟದಲ್ಲಿ ಪ್ರಥಮವಾಗಿ ಹಮ್ಮಿಕೊಂಡಿರುವ ಬೇಸಿಗೆ ಶಿಬಿರ ಇದಾಗಿದ್ದು, ಮಕ್ಕಳಿಗೆ ನೃತ್ಯ, ಜಾನಪದ, ಚಿತ್ರಕಲೆ ಸೇರಿದಂತೆ ವಿವಿಧ ಕೌಶಲಗಳನ್ನು ಕಲಿಸುವ ಕಾರ್ಯ ಮಾಡಲಾಗುವುದು ಎಂದರು.

ರಾಣೆಬೆನ್ನೂರ ಪರಿವರ್ತನ ಸದಸ್ಯ ಡಾ. ಗಿರೀಶ ಕೆಂಚಪ್ಪನವರ, ಜಾನಪದ ವಿಶ್ವವಿದ್ಯಾಲಯದ ಕುಲಸಚಿವ(ಮೌಲ್ಯಮಾಪನ) ಪ್ರೊ. ಎನ್. ಎಂ. ಸಾಲಿ ಮಾತನಾಡಿದರು. ಶಿಬಿರದ ನಿರ್ದೇಶಕ ಎಸ್. ನಾಗರಾಜ, ಕರ್ನಾಟಕ ವೈಭವ ಸಂಯೋಜಕ ಕೆ.ಎನ್. ಪಾಟೀಲ, ಕುಲಸಚಿವ ಶಹಜಾನ್ ಮದಕವಿ, ಸಹಾಯಕ ಪ್ರಾಧ್ಯಾಪಕರಾದ ಪ್ರೊ. ಚಂದ್ರಶೇಕರ ಸೊಬಟ್ಟಿ, ವಿಜಯಲಕ್ಷ್ಮೀ ಗೇಟಿಯವರ, ಶರೀಫ್ ಮಾಕಾಪುರ ಇದ್ದರು.

ಕಲಾವಿದ ಬಸವರಾಜ ಗೊಬ್ಬಿ ತಂಡದವರು ಜಾನಪದ ಗೀತೆ ಹಾಡಿದರು. ಪಲ್ಲವಿ ಚಾಕಲಬ್ಬಿ, ರಕ್ಷಿತಾ ಪವಾರ ಸಂಗಡಿಗರು ಜಾನಪದ ನೃತ್ಯ ಪ್ರದರ್ಶಿಸಿದರು.

**Source: Prajavani, date: 12-05-2022**

# ಪರಂಪರೆ ಮರೆಯುತ್ತಿರುವ ಯುವಜನತೆ

## ಮಕ್ಕಳ ದೇಶಿ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ದ್ಯಾಮನಕೊಪ್ಪ



ಶಿಗ್ಗಾಂವಿ ತಾಲೂಕಿನ ಗೋಟಗೊಡಿಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಹಮ್ಮಿಕೊಂಡ ಐದು ದಿನದ ಮಕ್ಕಳ ದೇಸಿ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಪ್ರಭಾರಿ ಕುಲಪತಿ ಪ್ರೊ. ಸಿ.ಟಿ.ಗುರುಪ್ರಸಾದ ಮಾತನಾಡಿದರು.

• **ಕನ್ನಡಪ್ರಭ ವಾರ್ತೆ** ಶಿಗ್ಗಾಂವಿ

ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಮಕ್ಕಳು ತಮ್ಮ ಮೂಲ ಪರಂಪರೆ ಮರೆತು ಬಿಡುತ್ತಿದ್ದಾರೆ, ಅದನ್ನು ಅವರ ಮನಸ್ಸಿನಲ್ಲಿ ಮೂಡಿಸುವ ಪ್ರಯತ್ನವನ್ನು ಕರ್ನಾಟಕ ಜಾನಪದವಿಶ್ವವಿದ್ಯಾಲಯ ಮಾಡಿದೆಎಂಬುದು ಹೆಮ್ಮೆಯ ಸಂಗತಿ ಎಂದು ಪ್ರಾಚಾರ್ಯ ಡಾ.ನಾಗರಾಜ ದ್ಯಾಮನಕೊಪ್ಪ ಹೇಳಿದರು.

ತಾಲೂಕಿನ ಗೋಟಗೊಡಿಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ರಾಣೆಬೆನ್ನೂರಿನ ಕರ್ನಾಟಕ ವೈಭವದ ಪರಿವರ್ತನಾ ಸಹಯೋಗದೊಂದಿಗೆ ವಿಶ್ವವಿದ್ಯಾಲಯದ ಮಲ್ಲಿಗೆ ದಂಡೆ ಸಭಾಂಗಣದಲ್ಲಿ ಹಮ್ಮಿಕೊಂಡ ಐದು ದಿನದ ಮಕ್ಕಳದೇಸಿಬೇಸಿಗೆಶಿಬಿರದಸಮಾರೋಪಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ನಾವು ಚಿಕ್ಕವರಿದ್ದಾಗ ಇಂತಹ ಸಾಮಾಜಿಕ ವಾತಾವರಣ ಇಂದಿಲ್ಲ, ಆದರೆ ನಮ್ಮ ಸಾಂಸ್ಕೃತಿಯ ವಾತಾವರಣವನ್ನು ವಿಶ್ವವಿದ್ಯಾಲಯ ಕಟ್ಟಲು ಮುನ್ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಅದು ಜನಮುಖಿಯಾಗಿ ಮುನ್ನುಗ್ಗುತ್ತಿದೆ ಎಂದರು. ಸಮಾರೋಪ ನುಡಿಗಳನಾಡಿದ ರಾಣೆಬೆನ್ನೂರಿನ ಪರಿವರ್ತನದ ಸದಸ್ಯ ಡಾ. ಗಣೇಶ ದೇವಗಿರಿಮಠ ಮಾತನಾಡಿ, ಮಕ್ಕಳ ಭವಿಷ್ಯ ಇಟ್ಟುಕೊಂಡು ವಿಶ್ವವಿದ್ಯಾಲಯ ಒಳ್ಳೆಯ ಕಾರ್ಯ ಮಾಡಿದೆ. ಅದರ ಕ್ರಿಯಾತ್ಮಕ ಚಟುವಟಿಕೆಗಳಿಗೆ ನಮ್ಮ ಸಹಕಾರ ಸದಾ ಇದೆ ಎಂದರು. ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವ ಪ್ರೊ.ಎನ್.ಎಂ.ಸಾಲಿ ಮಾತನಾಡಿ, ಜಾನಪದ ಎಂಬುದು ಕ್ರೀಯಾಶೀಲವಾದಂತಹದ್ದು, ಅಂತಹ ಕ್ರಿಯಾಶೀಲತೆಯನ್ನು ಮಕ್ಕಳು ಇಂದು ಕಲಿಯಬೇಕಾಗಿದೆ. ಅದನ್ನು ಜಾನಪದ ವಿಶ್ವವಿದ್ಯಾಲಯ ಮಾಡಿಕೊಟ್ಟಿದೆ. ಇನ್ನು ಮುಂದೆ ಈ ಮಕ್ಕಳು ಮತ್ತು ನಾವುಗಳು ಮೊಬೈಲ್ ಮೂಲಕ ಜಾನಪದ ಟಿಕ್‌ಟಾಕ್ ಮಾಡುವಂತಾಗಲಿ ಎಂದು ಆಶಾಭಾವನೆ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಪ್ರಭಾರಿ ಕುಲಪತಿ ಪ್ರೊ. ಸಿ.ಟಿ.ಗುರುಪ್ರಸಾದ ಮಾತನಾಡಿ, ಜಾನಪದ ಎನ್ನುವಂತಹದ್ದು ತಾಯಿ ಬೇರು ಇದ್ದಂತೆ ಅದಕ್ಕಾಗಿ ಇದಕ್ಕೆ ದೊಡ್ಡ ಶಕ್ತಿ ಇದೆ. ಆ ಶಕ್ತಿಯನ್ನು ಈ ಶಿಬಿರದ ಮಕ್ಕಳು ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂಬುದನ್ನು ಅವರ ಅನಿಸಿಕೆಯಿಂದ ನಾವು-ನೀವೆಲ್ಲ ಅರ್ಥಮಾಡಿಕೊಂಡಿದ್ದೇವೆ ಎಂಬುದು ಹೆಮ್ಮೆಯ ಸಂಗತಿ ಎಂದರು.

ಸಮಾರೋಪ ಸಮಾರಂಭದಲ್ಲಿ ಮಕ್ಕಳು ಶಿಬಿರದ ಬಗ್ಗೆ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು. ನಂತರ ಮಕ್ಕಳಿಂದ ಜಾನಪದ ನೃತ್ಯ ಪ್ರಸ್ತುತ ಪಡಿಸಿದರು.

ಸಹಾಯಕಪ್ರಾಧ್ಯಾಪಕ ಡಾ.ಅರುಣ ಜೋಳದ ಕೂಡ್ಲಿಗಿ ನಿರೂಪಿಸಿದರು. ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ.ಎಚ್.ಎಚ್.ನದಾಫ ಸ್ವಾಗತಿಸಿದರು.

ಸಹಾಯಕ ಪ್ರಾಧ್ಯಾಪಕ ಮತ್ತು ಶಿಬಿರದ ನಿರ್ದೇಶಕ ಡಾ.ಎಸ್. ನಾಗರಾಜ ವಂದಿಸಿದರು.



**Source: kannadaprabha, date: 16-05-2022**

ಸಾಲು ಸುದ್ದಿ ▶▶ ರಾಣೆಬೆನ್ನೂರಿನ ಬಸವನಗುಡಿ ನಗರ

# ಮಕ್ಕಳಲ್ಲಿ ಮೂಲ ಪರಂಪರೆ ಮೂಡಿಸಿ



ಗೋಟಗೋಡಿಯ ವಿಶ್ವವಿದ್ಯಾಲಯದ ಮಲ್ಲಿಗೆದಂಡೆ ಸಭಾಂಗಣದಲ್ಲಿ ಹಮ್ಮಿಕೊಂಡ ಐದು ದಿನದ ಮಕ್ಕಳ ದೇಸಿ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಪ್ರಭಾರಿ ಕುಲಪತಿ ಪ್ರೊ. ಸಿ.ಟಿ. ಗುರುಪ್ರಸಾದ ಮಾತನಾಡಿದರು.

ಶಿಗ್ಗಾವಿ(ಗ್ರಾಮೀಣ): ಇಂದಿನ ಜಾಗತೀಕರಣದ ಸಂದರ್ಭದಲ್ಲಿ ನಮ್ಮ ಮಕ್ಕಳು ತಮ್ಮ ಮೂಲ ಪರಂಪರೆ ಮರೆತು ಬಿಡುತ್ತಿದ್ದಾರೆ. ಅದನ್ನು ಅವರ ಮನಸ್ಸಿನಲ್ಲಿ ಮೂಡಿಸುವ ಪ್ರಯತ್ನವನ್ನು ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಮಾಡಿದೆ ಎಂಬುದು ಹೆಮ್ಮೆಯ ಸಂಗತಿ ಎಂದು ಡಾ. ನಾಗರಾಜ ದ್ಯಾಮನಕೊಪ್ಪ ಹೇಳಿದರು.

ತಾಲೂಕಿನ ಗೋಟಗೋಡಿಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ರಾಣೆಬೆನ್ನೂರಿನ ಕರ್ನಾಟಕ ವೈಭವದ ಪರಿವರ್ತನಾ ಸಂಯೋಗದೊಂದಿಗೆ ವಿಶ್ವವಿದ್ಯಾಲಯದ ಮಲ್ಲಿಗೆದಂಡೆ ಸಭಾಂಗಣದಲ್ಲಿ ಹಮ್ಮಿಕೊಂಡ ಐದು ದಿನದ ಮಕ್ಕಳ ದೇಸಿ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ರಾಣೆಬೆನ್ನೂರಿನ ಪರಿವರ್ತನದ ಸದಸ್ಯ ಡಾ. ಗಣೇಶ ದೇವಗಿರಿಮಠ ಮಾತನಾಡಿ, ಮಕ್ಕಳ ಭವಿಷ್ಯವನ್ನು ಇಟ್ಟುಕೊಂಡು ವಿಶ್ವವಿದ್ಯಾಲಯ ಒಳ್ಳೆಯ ಕಾರ್ಯ ಮಾಡಿದೆ. ಅದರ ಕ್ರಿಯಾತ್ಮಕ ಚಟುವಟಿಕೆಗಳಿಗೆ ನಮ್ಮ ಸಹಕಾರ ಸದಾ ಇದೆ ಎಂದರು.

ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವ ಪ್ರೊ. ಎನ್.ಎಂ. ಸಾಲಿ ಮಾತನಾಡಿ ಜಾನಪದ ಎಂಬುದು ಕ್ರಿಯಾಶೀಲವಾದಂತಹದು. ಅಂತಹ ಕ್ರಿಯಾಶೀಲತೆ ಮಕ್ಕಳು ಇಂದು ಕಲಿಯಬೇಕಾಗಿದೆ. ಅದನ್ನು ಜಾನಪದ ವಿಶ್ವವಿದ್ಯಾಲಯ ಮಾಡಿಕೊಟ್ಟಿದೆ ಎಂದರು.

ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಪ್ರಭಾರಿ ಕುಲಪತಿ ಪ್ರೊ. ಸಿ.ಟಿ. ಗುರುಪ್ರಸಾದ ಮಾತನಾಡಿ, ಜಾನಪದ ಎನ್ನುವಂತಹದ್ದು ತಾಯಿ ಬೇರು ಇದ್ದಂತೆ. ಅದಕ್ಕಾಗಿ ಇದಕ್ಕೆ ದೊಡ್ಡ ಶಕ್ತಿ ಇದೆ. ಆ ಶಕ್ತಿಯನ್ನು ಈ ಶಿಬಿರದ ಮಕ್ಕಳು ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂಬುದನ್ನು ಅವರ ಅನಿಸಿಕೆಯಿಂದ ನಾವು-ನೀವೆಲ್ಲಾ ಅರ್ಥಮಾಡಿಕೊಂಡಿದ್ದೇವೆ ಎಂಬುದು ನನ್ನ ಹೆಮ್ಮೆ ಎಂದರು.

ಸಹಾಯಕ ಪ್ರಾಧ್ಯಾಪಕ ಡಾ. ಅರುಣ ಜೋಳದ ಕೂಡ್ಲಗಿ ನಿರೂಪಿಸಿದರು. ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ. ಎಚ್.ಎಚ್. ಸದಾಫ ಎಲ್ಲರನ್ನು ಸ್ವಾಗತಿಸಿದರು.

ವಿವಿಯ ಸಹಾಯಕ ಪ್ರಾಧ್ಯಾಪಕರು ಮತ್ತು ಶಿಬಿರದ ನಿರ್ದೇಶಕ ಡಾ. ಎಸ್. ನಾಗರಾಜ ವಂದಿಸಿದರು.

ಯುಕ್ತ ಕರ್ನಾಟಕ Mon, 16 May 2022
epaper.samyukthakarnataka.com/c/6805

**Source: Samyukta Karnataka, date: 16-05-2022**

**For More Images Click on the Link**